O.S. NO. 91/2018
DW - 1.
Dated 07-07-2025

ಸಾಕ್ಷಿಯನ್ನು ಈ ದಿನ ದಿನಾಂಕ 07-07-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ ವಾದಿ ಪರವಾಗಿ ಶ್ರೀ ಆರ್ ಕೆ ಪಿ ವಕೀಲರಿಂದಃ

ಸರ್ವೆ ನಂ. 12/4+5+3 ಕ್ಷೇತ್ರ 2 ಎಕರೆ 30 ಗುಂಟೆ ಜಮಿನು ನನ್ನ ತಾಯಿ ಕರೆಬಸವ್ವ, ನೀಲವ್ವ, ಬಸವ್ವ , ಶಾಂತವ್ವ ರವರಿಗೆ ಅವರ ತಂದೆ ಕಡೆಯಿಂದ ಬಂದಿರುತ್ತದೆ ಎಂದರೆ ನನ್ನ ತಾಯಿ ಕರೆಬಸವ್ವ ಗೆ ಮಾತ್ರ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಆಸ್ತಿ ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮಂದಿರಿಗೆ ಸೇರಿ ಬಂದಿದ್ದು, ನನ್ನ ತಾಯಿಗೆ ಮಾತ್ರ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯ ತಂದೆ ನನ್ನ ತಾಯಿಗೆ ಸದರಿ ಆಸ್ತಿ ಭಕ್ಷಿಸ ಮೂಲಕ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಕುರಿತು ಭಕ್ಷಿಸ ಪತ್ರವನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರು ಮಾಡಿದ್ದೇನೆ. ಈ ಮಾತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ. 11/2+3ಎ ಕ್ಷೇತ್ರ 1 ಎಕರೆ 12 ಗಂಟೆ ಜಮಿನು ಸಹ ನನ್ನ ತಾಯಿಗೆ ಮತ್ತು ನನ್ನ ಚಿಕ್ಕಮ್ಮಂದಿರಿಗೆ ಬಾಯಿ ಮಾತು ಮೂಲಕ ಅವರ ತಂದೆಯವರ ಕೊಟ್ಟ ಆಸ್ತಿ ಇರುತ್ತದೆ ಎಂದರೆ ನನ್ನ ತಾಯಿಗೆ ಮಾತ್ರ ಕೊಟ್ಟ ಆಸ್ತಿ ಇರುತ್ತದೆ ಎಂದು ನುಡಿದಿರುತ್ತಾರೆ. ಈ 2 ಆಸ್ತಿಗಳನ್ನು ನನ್ನ ತಾಯಿ ಮೃತ ಪಟ್ಟ ನಂತರ ನೇರವಾಗಿ ನನ್ನ ಹೆಸರಿಗೆ ಹಚ್ಚಿಕೊಂಡಿರುತ್ತೇನೆ

ಎಂದರೆ ಸರಿಯಲ್ಲ. ದಾವಾ ಆಸ್ತಿ ಅನುಕ್ರಮ ಸಂಖ್ಯೆ 4 ರಿಂದ 6 ಆಸ್ತಿ ಗಳನನ್ನು ತೋರಿಸದೇ ಅಸಲು ದಾವಾ ಸಂಖ್ಯೆ 168/2012 ದಾವೆ ಹಾಕಿದ್ದೇವು ಎಂದರೆ ಸರಿಯಲ್ಲ. ಸರೋಜಾ ಕಲ್ಲನಗೌಡ ಪಾಟಿಲ ನನ್ನ ಚಿಕ್ಕಮ್ಮನ ಮಗಳು. ಸದರಿ ಅಸಲು ದಾವಾ ಸಂಖ್ಯೆ 168/2012 ರಲ್ಲಿ ನಾವು ಪಕ್ಷಗಾರರು ಇರಲಿಲ್ಲ. ದಾವಾ ಅನುಕ್ರಮ ಸಂಖ್ಯೆ 1 ರಿಂದ 10 ರಲ್ಲಿ ವಾದಿಯರಿಗೂ ಸಹ ತಲಾ ¼ ಹಿಸ್ಸೇ ಇದೆ ಎಂದರೆ ಸರಿಯಲ್ಲ . ಅದೇ ರೀತಿ ದಾವಾ ಮನೆಗಳಲ್ಲಿ ಸಹ ವಾದಿಯರಿಗೆ ¼ ಹಿಸ್ಸೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸರ್ಕಾರದ ಯೊಜನೆಗಳ ಸವಲತ್ತು ಪಡೆಯಲು ಮತ್ತು ಸಾಗುವಳಿ ಅನುಕೂಲ ಗೊಸ್ಕರ ದಾವಾ ಆಸ್ತಿಗಳ ಪಹಣಿ ಪತ್ರತ್ರಿಕೆಗಳಲ್ಲಿ ಪ್ರತ್ಯೇಕ ಹೆಸರು ನಮೂದು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಇಲ್ಲಿಯವರೆಗೆ ನಾವು ಪ್ರತಿವಾದಿಗಳು ಮತ್ತು ವಾದಿಗಳ ಮದ್ಯೆ ದಾವಾ ಆಸ್ತಿಗಳ ಕುರಿತು ವಾಟ್ನಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಬೈಲಹೊಂಗಲ ಪಟ್ಟಣದ ಮೂಗಿಯವರ ಲೆಔಟನಲ್ಲಿ ಇರುವ ಪ್ಲಾಟ ನಂ 43 ನಾನು ಖರೀದಿ ತೆಗೆದುಕೊಂಡಿದ್ದು ಇರುತ್ತದೆ. ಅದನ್ನು 2012 ರಲ್ಲಿ ಖರೀದಿ ಮಾಡಿರುತ್ತೇನೆ. ಸದರಿ ಪ್ಲಾಟನ್ನು ಸಹ ನಮ್ಮಗಳ ಮತ್ತು ವಾದಿಗಳ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತೇವೆ ಅದು ಸಹ ಒಟ್ಟು ಕುಟುಂಬದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪ್ಲಾಟನಲ್ಲಿ ಸಹ ವಾದಿಯರಿಗೆ ¼ ಹಿಸ್ಸೆ ಇದೆ ಎಂದರೆ ಸರಿಯಲ್ಲ.

O.S. NO. 91/2018
DW - 1.
Dated 07-07-2025

ಪಾಟೀ ಸವಾಲುಃ 4 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಆದ್ದರಿಂದ 4 ನೇ ಪ್ರತಿವಾದಿ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.